ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/ಮ.ಬಿ.ಕಾ/2022-23 ದಿನಾಂಕ: 13.05.2022

# ಸುತ್ತೋಲೆ

ವಿಷಯ: 2022-23 ನೇ ಶೈಕ್ಷಣಿಕ ವರ್ಷದಲ್ಲಿ " ಮಳೆಬಿಲ್ಲು ಕಾರ್ಯಕ್ರಮವನ್ನು" ಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ: 1. ಆಯುಕ್ತರ ಕಛೇರಿ ಪತ್ರ ಎಡಿಎಂ.2(1):ಶೈ.ವ.ನಿ:02:2021-22 ದಿ. 15.02.22

2. ಈ ಕಛೇರಿ ಸು.ತ್ತೋಲೆ ಸಂ: DSERT/EVG/2022-23 ಅ.ಹಾ/32/2021-22 ದಿನಾಂಕ: 04.3.2022

3. ಈ ಕಛೇರಿ ಪತ್ರ ಸಮ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/ಮ.ಬಿ.ಕಾ/2022-23 ದಿನಾಂಕ: 13.05.2022( ಮಾನ್ಯ ರಾಜ್ಯ ನಿರ್ದೇಶಕರ ಅನುಮೋದಿತ ಸುತ್ತೋಲೆ)

**********

ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಎರಡು ವರ್ಷಗಳಲ್ಲಿ ಮಕ್ಕಳು ಶಾಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗದ ಕಾರಣ ಶಾಲಾ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಕ್ಕಳನ್ನು ಹುರಿದುಂಬಿಸಿ, ಅವರಿಗೆ ಉತ್ತಮ ಕಲಿಕಾ ಅನುಭವವನ್ನು ನೀಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರವು 2022-2023 ನೇ ಶೈಕ್ಷಣಿಕ ವರ್ಷವನ್ನು **'ಕಲಿಕಾ ಚೇತರಿಕೆ ವರ್ಷ'** ಎಂದು ಘೋಷಿಸಿದ್ದು, ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 1 ರಿಂದ 9 ನೇ ತರಗತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಉಪಕ್ರಮದ ಪೂರ್ವಸಿದ್ಧತೆಗಾಗಿ ಕಲಿಕಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಶಾಲಾ ಆರಂಭವನ್ನು ಮಕ್ಕಳು ಹಬ್ಬದಂತೆ ಆಚರಿಸುವ ಸಲುವಾಗಿ ಮಕ್ಕಳ ಸ್ನೇಹಿ ಚಟುವಟಿಕೆಗಳಿಂದ ಶಾಲೆಯನ್ನು ಆರಂಭಿಸುವುದು. ಈ ನಿಟ್ಟಿನಲ್ಲಿ ಮಕ್ಕಳು ಸಂತಸದಿಂದ ಆನಂದಿಸಿ ಅನುಭವಿಸುವಂತೆ ಮಾಡುವ ಚಟುವಟಿಕೆಗಳನ್ನು ನಡೆಸುತ್ತಾ ಕಲಿಕೆಗೆ ಪೂರಕವಾಗಿ ಅನುಕೂಲಿಸಲು ಶಾಲಾ ಪ್ರಾರಂಭದ ಮೊದಲ ಎರಡು ವಾರಗಳಿಗೆ **'ಮಳೆಬಿಲ್ಲು'** ಕಾರ್ಯಕ್ರಮವನ್ನು ಯೋಜಿಸಿದೆ.

ಉಲ್ಲೇಖ-3 ರಲ್ಲಿ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಅನುಮೋದಿಸಿರುವ ಸುತ್ತೋಲೆಯ ಮುಂದುವರೆದ ಭಾಗವಾಗಿ "ಮಳೆಬಿಲ್ಲು" ಸಾಹಿತ್ಯದ ತರಗತಿ ಚಟುವಟಿಕೆಗಳ ನಿರ್ವಹಣೆ ಒಳಗೊಂಡಂತೆ ಶಾಲೆಗಳಲ್ಲಿ ಆಯೋಜಿಸಲು ಶಾಲಾ ಮುಖ್ಯಸ್ಥರು ಹಾಗೂ ಶಿಕ್ಷಕರು ಅನುಸರಿಸಬೇಕಾದ ಕ್ರಮಗಳು ಮತ್ತು ಉಸ್ತುವಾರಿ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಗತ್ಯ ಸೂಚನೆಗಳನ್ನು ಈ ಸುತ್ತೋಲೆಯಲ್ಲಿ ನೀಡಿದೆ.

ಕಾರ್ಯಕ್ರಮವು ಮಗುವಿಗೆ ಕೊರಡಿಯ ಅನುಭವ ಕೊಡದೆ ಮುಕ್ತವಾಗಿ ಒಳಗೊಳ್ಳುವ, ತಾನು ತನ್ನಂತಿರುವ, ಸಂಭ್ರಮಿಸುವ, ತನ್ನ ಯೋಚನೆ ಮತ್ತು ಯೋಜನೆಗಳಿಗೆ ಯಾವ ಅಡಚಣೆ ಇಲ್ಲದೇ ತಾನು ಎಲ್ಲವನ್ನು ಮಾಡಬಲ್ಲೆ!, ಎಲ್ಲವನ್ನೂ ನೋಡಬಲ್ಲೆ!, ಮತ್ತು ಎಲ್ಲವನ್ನು ಅನುಭವಿಸಬಲ್ಲೆ! ಎಂಬ ವಾತಾವರಣ ಸೃಷ್ಠಿಯಾಗಬೇಕು. ಮಕ್ಕಳ ಅಭಿವ್ಯಕ್ತಿಗೆ ಹೆಚ್ಚು ಅವಕಾಶ ಸಿಗುವಂತಾಗಬೇಕು.

ಮಳೆಬಿಲ್ಲು ಕಾರ್ಯಕ್ರಮದಲ್ಲಿ ಮಕ್ಕಳೆಲ್ಲ ಲವಲವಿಕೆಯಿಂದ ದಿನವನ್ನು ಕಳೆಯುವಂತಾಗಲು ಶಾಲೆಗಳಲ್ಲಿ ನಡೆಸಬಹುದಾದ ದಿನವಾರು ಸಲಹಾತ್ಮಕ ಚಟುವಟಿಕೆಗಳನ್ನು 14 ದಿನಗಳಿಗೆ ಒದಗಿಸಲಾಗಿದೆ. ಶಿಕ್ಷಕರು ಚಟುವಟಿಕೆಗಳನ್ನು ಅನುಕೂಲಿಸುವಾಗ ಸಣ್ಣಪುಟ್ಟ ಸೂಚನೆಗಳನ್ನು ನೀಡಬಹುದು. ಒಟ್ಟಾರೆ ಆ ಇಡೀ ದಿನ ಮಗುವಿನದ್ದೇ ಮತ್ತು ಮಗುವಿನ ನಗುವಿನದ್ದೇ ಆಗುವಂತೆ ಕ್ರಮ ವಹಿಸುವುದು.

**'ಮಳೆಬಿಲ್ಲು' - ಕಾರ್ಯಕ್ರಮದ ದಿನವಾರು ಚಟುವಟಿಕೆಗಳ ವಿವರ:**

- **ಮೊದಲನೇ ದಿನ:**

**'ಆಟದ ಹಬ್ಬ':** ಆಟಗಳಿಗೆ ಸಹಜವಾಗಿಯೇ ಆಕರ್ಷಿತರಾಗುವ ಮಕ್ಕಳು ಹೊಸ ಉತ್ಸಾಹ, ಚೈತನ್ಯಗಳೊಂದಿಗೆ ಚಟುವಟಿಕೆಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಳ್ಳಲು ಮನೋರಂಜನೆಯ ಆಟಗಳನ್ನು ಆಡಲು ಅವಕಾಶ ಕಲ್ಪಿಸವುದು.

- **ಎರಡನೇ ದಿನ:**

**'ಆಟಿಕೆ ತಯಾರಿ':** ಸುಲಭವಾಗಿ ಲಭ್ಯವಾಗುವ ವಸ್ತುಗಳನ್ನು ಬಳಸಿ, ಮಕ್ಕಳಿಂದಲೇ ಸರಳವಾದ ಆಟಿಕೆಗಳನ್ನು ತಯಾರಿಸಿ,ಅವುಗಳನ್ನು ಬಳಸಿ ಆಟ ಆಡಲು ಮಾರ್ಗದರ್ಶನ ನೀಡುವುದು.

- **ಮೂರನೇ & ನಾಲ್ಕನೇ ದಿನ:**

**'ನಾಟಕದ ಹಬ್ಬ':** ಮಕ್ಕಳೇ ಸೇರಿ ಕಥೆ ಕಟ್ಟುವುದು, ನಾಟಕ ತಯಾರಿ ನಡೆಸುವುದು, ಅವರಿಗೆ ತೋಚಿದ ಪಾತ್ರಗಳ ಪರಿಚಯ ಮತ್ತು ಪಾತ್ರ ಹಂಚಿಕೊಳ್ಳಲು ಮುಕ್ತ ಅವಕಾಶ ನೀಡುವುದು. ತಾವು ಕಂಡ ಬದುಕಿನ ವಿವಿಧ ಪಾತ್ರಗಳನ್ನು ಅಭಿನಯಿಸಲು, ತಮ್ಮದೇ ವೇಷಭೂಷಣ, ರಂಗಸಜ್ಜಿಕೆ, ಪ್ರಸಾಧನ, ಹಾಡು, ಹಸೆ, ಮಾತು, ಪಟ್ಟಾಂಗ, ಹರಟೆ ನಡೆಸಿ, ಸಂಭ್ರಮ ಮಕ್ಕಳಲ್ಲಿ ಮೂಡಲಿ. ಗುಂಪುಗುಂಪಾಗಿ ನಾಟಕದ ವಸ್ತುಗಳನ್ನು ಅವರೇ ತೀರ್ಮಾನಿಸಿ ನಾಟಕ ಕಟ್ಟಲು ಮತ್ತು ಪ್ರದರ್ಶನ ನೀಡಲು ಅವಕಾಶ ಒದಗಿಸುವುದು. ಒಂದಿಷ್ಟು ಸಲಹಾತ್ಮಕ ಸನ್ನಿವೇಶಗಳನ್ನು ಮಳೆಬಿಲ್ಲು ಸಾಹಿತ್ಯದಲ್ಲಿ ಒದಗಿಸಿದೆ.

- **ಐದನೇ ದಿನ:**

**'ಚಿತ್ರ-ಚಿತ್ತಾರ ಕಲಾ ಹಬ್ಬ':** 'ಕಸ ಆರಿಸು ಕಲಿಕೆಗೆ ಬಳಸು' ಎಂಬ ಅಂಶವನ್ನು ಆಧರಿಸಿ, ಮಗುವಿಗೆ 'ಕಸದಿಂದ ರಸ' ಎನ್ನುವ ಮಾತನ್ನು ಪರಿಚಯಿಸುತ್ತಾ, ಅನುಪಯುಕ್ತ ವಸ್ತುಗಳಿಂದ ಬೊಂಬೆ, ಅಲಂಕಾರಿಕ ವಸ್ತುಗಳು, ಮನೆಯಲ್ಲಿ ಅಥವಾ ಶಾಲೆಯಲ್ಲಿ ಬಳಸುವ ಉಪಯುಕ್ತ ವಸ್ತುಗಳನ್ನು ತಯಾರಿಸುವ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

- **ಆರನೇ ದಿನ:**

**'ಚಿತ್ರ-ಜಗತ್ತು':** ಡ್ರಾಯಿಂಗ್ ಹಾಳೆಗಳು, ಬ್ರಶ್, ಬಣ್ಣಗಳು, ಕ್ರೇಯಾನ್ಸ್ , ಅಂಟು ಇತ್ಯಾದಿಗಳನ್ನು ಬಳಸಿ ತಮ್ಮಲ್ಲಿರುವ ಭಾವನೆ, ವಿಚಾರಗಳನ್ನು ಸೃಜನಾತ್ಮಕವಾಗಿ ಹಾಗೂ ಕಲಾತ್ಮಕವಾಗಿ ಅಭಿವ್ಯಕ್ತ ಪಡಿಸುವ 'ಚಿತ್ರಕಲೆ'ಯನ್ನು ಮಾಡಲು ಅವಕಾಶ ಒದಗಿಸುವುದು.

- **ಏಳನೇ ದಿನ:**

**'ಕಥೆಗಳ ಹಬ್ಬ'**: ಮಕ್ಕಳಲ್ಲಿ ಸೃಜನಶೀಲತೆ, ಕಲ್ಪನಾಶಕ್ತಿ, ಭಾಷಾಭಿವ್ಯಕ್ತಿ, ಆಲಿಸುವಿಕೆ ಮೂಲಕ ಮಕ್ಕಳು ತಮ್ಮನ್ನು ಮುಕ್ತವಾಗಿ ತೆರೆದುಕೊಳ್ಳಲು ಅವಕಾಶ ನೀಡುವ ಕಥೆಗಳನ್ನು ಸರಳವಾಗಿ ರಚಿಸುವಂತೆ ಪ್ರೋತ್ಸಾಹಿಸುವುದು. ಮಕ್ಕಳ ತರಗತಿ ಮಟ್ಟ ಹಾಗೂ ಆಸಕ್ತಿಗೆ ಅನುಗುಣವಾಗಿ ಕೈಪಿಡಿಯಲ್ಲಿ ನೀಡಿರುವ ಸನ್ನಿವೇಶಗಳನ್ನು ಆಯ್ಕೆ ಮಾಡಿಕೊಂಡು ಕಥೆಗಳನ್ನು ಕಟ್ಟಿ ಅವುಗಳನ್ನು ಅಭಿವ್ಯಕ್ತಿಸಲು ಅವಕಾಶ ನೀಡುವುದು.

- **ಎಂಟನೇ ದಿನ:**

**'ಕವಿತೆ ಕಟ್ಟೋಣ ಹಾಡು ಹಾಡೋಣ'**: ಕೊಟ್ಟಂತಹ ಸನ್ನಿವೇಶ ಹಾಗೂ ಪದಗಳ ಜೋಡಣೆಯೊಂದಿಗೆ ತಮ್ಮದೇ ಆದ ಕವಿತೆ ರಚಿಸಲು ಮತ್ತು ತಮಗಿಷ್ಟವಾದ ರಾಗದೊಂದಿಗೆ ಹಾಡಲು ಮಕ್ಕಳಿಗೆ ತಿಳಿಸುವುದು.ಇದರಿಂದ ಮಕ್ಕಳು ಹಾಡುತ್ತಾ, ಆನಂದಿಸಿ ನಲಿಯುತ್ತಾರೆ.

- **ಒಂಬತ್ತನೇ ದಿನ:**

**'ಪರಿಸರಹಬ್ಬ'**: ಪ್ರಾಣಿ/ಪಕ್ಷಿ ಕೀಟಗಳ ಸದ್ದು, ವಸ್ತುಗಳ ಶಬ್ದ ಹಾಗೂ ವಾಹನಗಳ ಶಬ್ದ ಆಲಿಸಿ ಅವುಗಳನ್ನು ಪಟ್ಟಿ ಮಾಡುವುದು, ಸಸ್ಯ ಗಿಡಗಳ ಸಂರಕ್ಷಣೆ, ನೈಸರ್ಗಿಕ ವಸ್ತುಗಳನ್ನು ಬಳಸಿ ಬಣ್ಣಗಳನ್ನು ತಯಾರಿಸುವಂತಹ ಚಟುವಟಿಕೆಗಳನ್ನು 'ನಿಸರ್ಗದೆಡೆಗೆ ನಮ್ಮ ನಡಿಗೆ' ಶೀರ್ಷಿಕೆಯಡಿ ಮಾಡಿಸುವುದು.

- **ಹತ್ತನೇ ದಿನ:**

**'ಗಣಿತದ ಗಮ್ಮತ್ತು'**: ವಿದ್ಯಾರ್ಥಿಗಳಿಗೆ ಗಣಿತದ ಬಗೆಗಿನ ಭಯವನ್ನು ಹೋಗಲಾಡಿಸಿ ಗಣಿತವೆಂಬುದು ಆಟಗಳಷ್ಟೇ ಆಪ್ತ ಎಂಬ ಭಾವನೆ ಮೂಡಿಸುವಂತಹ ಚಟುವಟಿಕೆಗಳಲ್ಲಿ ಮಗು ಭಯಮುಕ್ತವಾಗಿ ಭಾಗವಹಿಸಿ ಗಣಿತದ ಗಮ್ಮತ್ತನ್ನು ಅನುಭವಿಸುವಂತಾಗಲು ಕೈಪಿಡಿಯಲ್ಲಿ ನೀಡಿರುವ ಒಗಟು, ಗಣಿತದ ಆಟಗಳನ್ನು ಆಡಿಸುವುದು.

- **ಹನ್ನೊಂದನೇ ದಿನ:**

**'ಇತಿಹಾಸದ ಹಬ್ಬ- ನಾವಿನ್ನೂ ಮರೆತಿಲ್ಲ'**: ವಿದ್ಯಾರ್ಥಿಗಳಿಗೆ ಗತಕಾಲದ ಜೀವನದ ಬಗ್ಗೆಅರಿವು ನೀಡುವಂತಹ, ತನ್ನಹಿರಿಯರು ಬಳಸಿದ ವಸ್ತುಗಳ ಬಗ್ಗೆ ಆಸಕ್ತಿ ಅಭಿಮಾನವನ್ನು ತಾಳುವಂತಹ, ತನ್ನಸ್ಥಳೀಯ ಜನಪದ ಜೀವನದ ಬಗ್ಗೆ ಗೌರವ ತಾಳುವಂತಹ ಚಟುವಟಿಕೆಗಳನ್ನು ಮಾಡಿಸುವುದು.

- **ಹನ್ನೆರಡನೇ ದಿನ:**

**'ಅಡುಗೆ ಮನೆಯಲ್ಲಿ ವಿಜ್ಞಾನ'**: ಅಡುಗೆಮನೆಯಲ್ಲಿನ ವಸ್ತುಗಳನ್ನು ಬಳಸಿಕೊಂಡು ಅಡುಗೆಮನೆಯಲ್ಲಿ ನಡೆಸುವ ವಿವಿಧ ಪ್ರಕ್ರಿಯೆಗಳ ಹಿಂದಿನ ಸರಳ ವೈಜ್ಞಾನಿಕ ತತ್ವಗಳನ್ನು ಅರ್ಥೈಸುವ ಚಟುವಟಿಕೆಗಳನ್ನು ನಡೆಸುವುದು.

➢ **ಹದಿಮೂರನೇ ದಿನ:**

**'ಗೊಂಚಲು' –ಸಾಂಸ್ಕೃತಿಕ ಸಂಭ್ರಮ:** ಭಾಷೆಯ ನಿರ್ಬಂಧವಿಲ್ಲದೇ, ಸ್ಥಳೀಯ ಭಾಷೆಯನ್ನು ಒಳಗೊಂಡು ಜನಪದಗೀತೆ, ಭಾವಗೀತೆ, ಭಕ್ತಿಗೀತೆ, ದೇಶಭಕ್ತಿಗೀತೆ, ಸುಗಮ ಸಂಗೀತ, ರಂಗಗೀತೆ ಇತ್ಯಾದಿಗಳನ್ನು ಹಾಡಿಸುವುದು. ನಂತರ ಸಂಗೀತ ವಾದ್ಯಗಳನ್ನು ಬಳಸಿಕೊಂಡು ಸಂಗೀತ ಪ್ರದರ್ಶನ ಹಾಗೂ ಅಭಿನಯ ಮಾಡಲು ಪ್ರೋತ್ಸಾಹಿಸುವುದು.

➢ **ಹದಿನಾಲ್ಕನೇ ದಿನ:**

**'ಶಾಲೆ ಸಿಂಗಾರ':** ವಿದ್ಯಾರ್ಥಿಗಳು ಶಾಲಾ ಆವರಣವನ್ನು ಸ್ವಚ್ಛಗೊಳಿಸಿ, ರಂಗೋಲಿ ಹಾಕಿ, ತಳಿರು ತೋರಣವನ್ನು ಕಟ್ಟಿ, ಮೊದಲ ದಿನದಿಂದ ತಯಾರಿಸಿದ ವಸ್ತುಗಳಿಂದ (ಕರಕುಶಲ) ಶಾಲೆಯನ್ನುಅಲಂಕರಿಸಲು ಹಾಗೂ ಪ್ರದರ್ಶನ ಕಲೆಗಳನ್ನು ನೀಡಲು ಪ್ರೋತ್ಸಾಹಿಸುವುದು. ಅಂತಿಮವಾಗಿ 'ಹೆತ್ತವರ ಚಾವಡಿ' ಕಾರ್ಯಕ್ರಮದಡಿ ಇಡೀ ದಿನ ನಡೆದ ಕಾರ್ಯಕ್ರಮಗಳನ್ನು ವೀಕ್ಷಿಸಿದ ಪೋಷಕರು ತಮ್ಮ ಅನಿಸಿಕೆ-ಸಲಹೆ-ಸೂಚನೆಗಳನ್ನು ವ್ಯಕ್ತಪಡಿಸಲು ಅವಕಾಶ ನೀಡುವುದು.

ಮೇಲಿನ ಎಲ್ಲಾ ಚಟುವಟಿಕೆಗಳನ್ನು **'ಮಳೆಬಿಲ್ಲು'** ಕೈಪಿಡಿಯಲ್ಲಿ ವಿವರವಾಗಿ ನೀಡಿದ್ದು, ಸದರಿ ಸಾಹಿತ್ಯವನ್ನು ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್ dsert.kar.nic.in ನಲ್ಲಿ Upload ಮಾಡಲಾಗಿದೆ.

**'ಮಳೆಬಿಲ್ಲು' ಕಾರ್ಯಕ್ರಮವನ್ನು ಶಾಲೆಗಳಲ್ಲಿ ಆಯೋಜಿಸಲು ಶಾಲಾ ಮುಖ್ಯಸ್ಥರು ಹಾಗೂ ಶಿಕ್ಷಕರು ಅನುಸರಿಸಬೇಕಾದ ಕ್ರಮಗಳು:**

- 1 ರಿಂದ 9ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಆಯಾ ವಯೋಮಾನಕ್ಕನುಗುಣವಾಗಿ ಆಯಾ ಶಾಲಾ ಭೌಗೋಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ಮಳೆಬಿಲ್ಲು ಚಟುವಟಿಕೆಗಳನ್ನು ಆಯೋಜಿಸುವುದು.
- ವಿದ್ಯಾರ್ಥಿಗಳಿಗೆ ಯಾವುದೇ ದೈಹಿಕ ಮತ್ತು ಮಾನಸಿಕ ತೊಂದರೆ ಉಂಟಾಗದಂತೆ ಶಿಸ್ತಿನಿಂದ ಚಟುವಟಿಕೆಗಳನ್ನು ಆಯೋಜಿಸುವುದು ಹಾಗೂ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪ್ರತ್ಯಕ್ಷ ಅನುಭವಗಳನ್ನು ಪಡೆಯಲು ಹೆಚ್ಚು ಆದ್ಯತೆ ಒದಗಿಸುವುದು.
- ಸಂಬಂಧಿಸಿದ ಯೋಜನೆಯನ್ನು ಮೊದಲೇ ಸಿದ್ಧಪಡಿಸಿಕೊಂಡು, ಯಾವುದೇ ಆರ್ಥಿಕ ಹೊರೆ ಆಗದಂತೆ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಚಟುವಟಿಕೆಗಳನ್ನು ಆಯೋಜಿಸುವುದು.
- ಚಟುವಟಿಕೆ ಪ್ರಾರಂಭಿಸುವ ಮುನ್ನ ಅಗತ್ಯ ಸೂಚನೆಗಳನ್ನು ನೀಡಿ ಎಲ್ಲಾ ಮಕ್ಕಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳಲ್ಲಿ ಅಂಜಿಕೆ, ಹಿಂಜರಿಕೆ ಮತ್ತು ಭಯ ಬರದಂತೆ ಮುಕ್ತವಾಗಿ ಅಭಿವ್ಯಕ್ತಿಸಲು ಸೂಕ್ತ ಮಾರ್ಗದರ್ಶನ ನೀಡುವುದು.
- **'ಮಳೆಬಿಲ್ಲು'** ಕೈಪಿಡಿಯಲ್ಲಿ ಸೂಚಿಸಿರುವ ತರಗತಿವಾರು ಆಟ/ಚಟುವಟಿಕೆಗಳನ್ನು ವಿವಿಧ ತರಗತಿಗಳಿಗೆ, ವಯೋಮಾನಕ್ಕೆ ಅನುಗುಣವಾಗಿ ಸಂಯೋಜಿಸಿ ನಿರ್ವಹಿಸುವುದು.
- **'ಮಳೆಬಿಲ್ಲು'** ಕೈಪಿಡಿಯಲ್ಲಿ ಸೂಚಿಸಿರುವ ಆಟಗಳು/ಚಟುವಟಿಕೆಗಳು ಮಕ್ಕಳು ಶಾಲಾ ಪರಿಸರಕ್ಕೆ ಹೊಂದಿಕೊಳ್ಳಲು ರೂಪಿಸಲಾಗಿದೆ. ಹಾಗಾಗಿ ಈ ಆಟಗಳ ಮೂಲಕ ಯಾವುದೇ ಸ್ಪರ್ಧೆಗಳನ್ನು ನಡೆಸುವಂತಿಲ್ಲ ಹಾಗೂ ಬಹುಮಾನಗಳಿಗೆ ಅವಕಾಶ ಇರುವುದಿಲ್ಲ.

- ಯೋಜನೆ/ಚಟುವಟಿಕೆ ತಯಾರಿಕಾ ಹಂತದಲ್ಲಿ ಪ್ರತೀ ಸಂದರ್ಭದಲ್ಲಿಯೂ, ಕಾರ್ಯಕ್ರಮ ನಡೆಸುವಾಗ ಶಿಕ್ಷಕರು ಜೊತೆಗಿದ್ದು ಚಟುವಟಿಕೆಗಳನ್ನು ನಿರ್ವಹಿಸುವುದು.
- ಮೇಲಿನ ಎಲ್ಲಾ ಕ್ರಮಗಳನ್ನು ಅನುಸರಿಸಿ **'ಮಳೆಬಿಲ್ಲು'** ಚಟುವಟಿಕೆಗಳ ಮೂಲಕ ಮಕ್ಕಳನ್ನು ಹುರಿದುಂಬಿಸಿ 2022-2023 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳನ್ನು ಸನ್ನದ್ಧರನ್ನಾಗಿಸಲು ಕ್ರಮ ಕೈಗೊಳ್ಳುವುದು.

**ಉಸ್ತುವಾರಿ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು:**

- ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿನ ಶಾಲಾ ಮುಖ್ಯಸ್ಥರ ಸಭೆಯನ್ನು ನಡೆಸಿ ಶಾಲಾ ಪ್ರಾರಂಭದ ಮೊದಲ 2 ವಾರಗಳಿಗೆ **'ಮಳೆಬಿಲ್ಲು'** ಕಾರ್ಯಕ್ರಮವನ್ನು ಅನುಷ್ಠಾನಿಸಲು ಮಾರ್ಗದರ್ಶನ ನೀಡುವುದು.

- ಕ್ಷೇತ್ರ ಮಟ್ಟದ ಉಸ್ತುವಾರಿ ಅಧಿಕಾರಿಗಳಾದ ಬಿ.ಇ.ಒ, ಬಿ.ಆರ್.ಸಿ, ಇ.ಸಿ.ಒ, ಬಿ.ಆರ್.ಪಿ, ಸಿ.ಆರ್.ಪಿ, ಹಾಗೂ ಬಿ.ಐ.ಇ.ಆರ್.ಟಿ ರವರಿಗೆ 'ಮಳೆಬಿಲ್ಲು' ಕಾರ್ಯಕ್ರಮದ ಅರಿವು ಮೂಡಿಸಿ ಅನುಪಾಲನೆಗೆ ಕ್ರಮವಹಿಸುವುದು.
- ಕಲಿಕಾ ಚೇತರಿಕೆ ಉಪಕ್ರಮದ ನಿರಂತರ ಅನುಪಾಲನೆಗಾಗಿ ಹಂಚಿಕೆ ಮಾಡಿರುವ ಶಾಲೆಗಳಿಗೆ ಆಯಾ ಅಧಿಕಾರಿಗಳು ಭೇಟಿ ನೀಡಿ 'ಮಳೆಬಿಲ್ಲು' ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಕ್ರಮವಹಿಸುವುದು.
- ಜಿಲ್ಲಾ ಹಾಗೂ ಕ್ಷೇತ್ರಮಟ್ಟದ ಎಲ್ಲಾ ಉಸ್ತುವಾರಿ ಅಧಿಕಾರಿಗಳು 'ಮಳೆಬಿಲ್ಲು' ಕಾರ್ಯಕ್ರಮದ ಚಟುವಟಿಕೆಗಳನ್ನು ನಿರ್ವಹಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು-85

**ಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.

2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
5. ಅಪರ ಆಯುಕ್ತರು, ಸಾ.ಶಿ.ಇ ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಸಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.